# ಸರ್ಕಾರೀ ಶಾಲೆಯೆಂಬ ಹೆಸರಿನ ಮೌಲ್ಯ

**ಮೂಲ : ದಿಲೀಪ್ ರಂಜೇಕರ್**

ಗ್ರಾಮೀಣ ಪ್ರದೇಶದ ಸರ್ಕಾರೀ ಶಾಲೆಗಳೊಡನೆ ಕೆಲಸ ಮಾಡಲು ಮತ್ತು ಸರ್ಕಾರೀ ಶಾಲಾ ವ್ಯವಸ್ಥೆಯ (ಒಂದೊಂದೇ ಶಾಲೆಗಳು ಅಥವಾ ಒಂದೊಂದೇ ಪ್ರದೇಶಗಳ ಬದಲಾಗಿ) ಬಗ್ಗೆ ಗಮನ ಕೇಂದ್ರೀಕರಿಸಲು ಅಜೀಮ್ ಪ್ರೇಮ್‌ಜಿ ಪ್ರತಿಷ್ಠಾನವು ಪ್ರಮುಖ ನಿರ್ಧಾರ ತಳೆದಾಗ, ಸರ್ಕಾರೀ ಶಾಲಾ ವ್ಯವಸ್ಥೆಯಲ್ಲಿನ ಹಲವಾರು ಸವಾಲುಗಳ ಬಗ್ಗೆ ಅರಿವಿತ್ತು. ಹಲವು ವಿಧದಲ್ಲಿ ಇದು ಪ್ರತಿಷ್ಠಾನಕ್ಕೆ ಒಂದು ಸಹಜ ನಿರ್ಧಾರವಾಗಿತ್ತು.

ನಾವು, ಸಾಮಾಜಿಕ ಬದಲಾವಣೆಯಲ್ಲಿ ಭಾಗಿಯಾಗುವ ಹಲವು ಆಯ್ಕೆಗಳನ್ನು ಗಮನಿಸಿದಾಗ, ಶಿಕ್ಷಣ ಬಹಳ ಪ್ರಬಲ ಮಾಧ್ಯಮವಾಗಿ ನಮಗೆ ಕಂಡಿತು. ಶೈಕ್ಷಣಿಕ ವಲಯದೊಳಗೂ ಕೂಡ ಉನ್ನತ ಶಿಕ್ಷಣ, ತಾಂತ್ರಿಕ ಶಿಕ್ಷಣ, ಆಡಳಿತ/ನಿರ್ವಹಣೆ ಶಿಕ್ಷಣ ಮುಂತಾದ ಆಯ್ಕೆಗಳಿದ್ದವು. ಶಾಲಾ ಶಿಕ್ಷಣದಲ್ಲೇ ಎಲ್ಲದರ ಮೊಳಕೆ ಎಂದು ಮನಗಂಡು ಶಾಲಾ ಶಿಕ್ಷಣವನ್ನೇ ಆದ್ಯತೆಯನ್ನಾಗಿ ಆಯ್ದುಕೊಂಡದ್ದು ನಮ್ಮ ಸಹಜ ನಿರ್ಧಾರವಾಯಿತು.

ಲಭ್ಯ ಜನಗಣತಿಯ ಅಂಕಿಅಂಶಗಳ ಪ್ರಕಾರ, 1998ರಲ್ಲಿ ದೇಶದ ಶೇ 84 ಕ್ಕೂ ಹೆಚ್ಚು ಮಕ್ಕಳು (ಗ್ರಾಮೀಣ ಭಾರತದ ಶೇ 88 ಕ್ಕೂ ಮೀರಿ) ಸರ್ಕಾರೀ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಾ ಇದ್ದರು. ಮತ್ತೂ ದೊಡ್ಡ ಸವಾಲೆಂದರೆ 59 ದಶಲಕ್ಷಕ್ಕೂ ಹೆಚ್ಚಿನ ಮಕ್ಕಳು ಶಾಲೆಯ ಹೊರಗೇ ಉಳಿದಿರುವುದು. ಪ್ರೋಬ್ ವರದಿಯು ಮಕ್ಕಳು ಶಾಲಾವ್ಯವಸ್ಥೆಯಿಂದ ಹೊರ ಹಾಕಲ್ಪಡಲು ಅಥವಾ ಶಾಲೆಯ ಹೊರಗೇ ಉಳಿಯಲು ಹಲವು ಕಾರಣಗಳನ್ನು ಹೆಕ್ಕಿ ಹೊರತಂದಿತು.

ಸಮಾಜದ ಮಧ್ಯಮ ವರ್ಗದಿಂದ ಹಿಡಿದು, ಸಮಾಜದ ಒಂದು ಭಾಗ ಸರ್ಕಾರೀ ಶಾಲೆಗಳಿಂದ ಕಾಲ್ಕಿತ್ತಿರುವುದನ್ನು ಕೂಡ ನಾವು ಕಂಡುಕೊಂಡೆವು. ನಿಜದಲ್ಲಿ ಅವರು ಆರೋಗ್ಯ, ನಾಗರೀಕ ಸರಬರಾಜು ವ್ಯವಸ್ಥೆ, ಸಾರಿಗೆ ಇತ್ಯಾದಿ ಬಹಳಷ್ಟು ಸಾರ್ವಜನಿಕ ವ್ಯವಸ್ಥೆಗಳಿಂದ ಹೊರಹೋಗಿದ್ದಾರೆ. ಹಾಗಾಗಿ, ಸರ್ಕಾರೀ ಶಾಲೆಗಳಲ್ಲಿ ಉಳಿದವರೆಂದರೆ ಧ್ವನಿ ಮತ್ತು ಆಯ್ಕೆಗಳಿಲ್ಲದವರೇ. ಸರ್ಕಾರೀ ವ್ಯವಸ್ಥೆಯ ಮೇಲೆ ಉತ್ತಮ ಗುಣಮಟ್ಟದ ಸಾರ್ವಜನಿಕ ಸೇವೆ - ಶಿಕ್ಷಣವೂ ಸೇರಿದಂತೆ - ನೀಡಬೇಕೆಂಬ ಒತ್ತಡವನ್ನು ಸಹಜವಾಗಿಯೇ ಇದು ಗಣನೀಯವಾಗಿ ಕಡಿಮೆ ಮಾಡಿದೆ.

ಸಮಯ ಸರಿದಂತೆ ನಮಗೆ ಕಾರ್ಯಕ್ಷೇತ್ರದ ಹರಹು ಅರಿವಾಯಿತು. 1.3 ದಶಲಕ್ಷಕ್ಕೂ ಮೀರಿ ಶಾಲೆಗಳು, 250 ದಶಲಕ್ಷಕ್ಕೂ ಮೀರಿ ವಿದ್ಯಾರ್ಥಿಗಳು, 70 ದಶಲಕ್ಷಕ್ಕೂ ಮೀರಿ ಶಿಕ್ಷಕರು ಮತ್ತೊಂದು ದಶಲಕ್ಷ ಜನ ಶಾಲಾ ವ್ಯವಸ್ಥೆಗೆ ಹೊರಗಿನಿಂದ ಒತ್ತಾಸೆ ನೀಡುತ್ತಿರುವವರು, ಹೀಗೆ. ಒಂದು ದೊಡ್ಡ ವ್ಯವಸ್ಥೆಯನ್ನು, ಅದರ ಗಾತ್ರದಿಂದಲೇ ಮೊದಲ್ಗೊಂಡು, ನಿರ್ವಹಿಸುವುದರ ಅರಿವಿರುವ ಯಾರಿಗಾದರೂ, ಅಂತಹ ವ್ಯವಸ್ಥೆಯಲ್ಲಿ ಕೆಲಸಗಳನ್ನು ಆಗು ಮಾಡುವುದರ ಹಿಂದಿರುವ ಸಿಕ್ಕುಗಳು ತಿಳಿಯುತ್ತವೆ. ತಮ್ಮ ಪರಿಸ್ಥಿತಿ, ಸಂಸ್ಕೃತಿ ಮತ್ತು ಸಮಾಜಾರ್ಥಿಕ ಸ್ಥಿತಿಗಳ ಆಧಾರದಲ್ಲಿ 30 ಬೇರೆ ಬೇರೆ ರಾಜ್ಯಗಳು ಬೇರೆ ಬೇರೆ ತೆರನಾಗಿ ಶಿಕ್ಷಣದ ನಿರ್ವಹಣೆ ಮಾಡುತ್ತಿರುವುದು, ಈ ಕಾರ್ಯಗತಗೊಳಿಸುವಲ್ಲಿನ ಸಂಕೀರ್ಣತೆಯನ್ನು ಮತ್ತಷ್ಟು ಜಟಿಲಗೊಳಿಸುತ್ತದೆ.

2000 ಇಸವಿಯಲ್ಲಿ, ಸರ್ವ ಶಿಕ್ಷಾ ಅಭಿಯಾನ ಆರಂಭವಾದ ನಂತರ, ಸರ್ಕಾರವು ಬಹಳಷ್ಟು ಒಳ್ಳೆಯ ನಡೆಗಳನ್ನು ಇಟ್ಟಿದೆ. ಇದರಿಂದ ಶಾಲೆಯ ಸಂಖ್ಯೆಗಳಲ್ಲಿ, ತರಗತಿಗಳ ಸಂಖ್ಯೆಯಲ್ಲಿ, ಶೌಚಾಲಯಗಳನ್ನು ನಿರ್ಮಿಸುವುದರಲ್ಲಿ, ಕುಡಿಯುವ ನೀರಿನ

ವ್ಯವಸ್ಥೆ ಮಾಡುವಲ್ಲಿ, ಶಿಕ್ಷಕರ ನೇಮಕದಲ್ಲಿ ಗಣನೀಯವಾದ ಹೆಚ್ಚಳವಾಗಿದೆ. ಆದರೂ ಗುಣಮಟ್ಟ ಮತ್ತು ಸಮಾನತೆಯ ಶಿಕ್ಷಣವು ಬಹಳ ದೊಡ್ಡ ಸಂಖ್ಯೆಯ ಜನರಿಗೆ ಮರೀಚಿಕೆಯಾಗಿಯೇ ಉಳಿದಿದೆ. ಸ್ವಾತಂತ್ರ್ಯ ಬಂದು 68 ವರ್ಷದ ನಂತರ ಮತ್ತು ರಾಷ್ಟ್ರೀಯ ಶಿಕ್ಷಣ ನೀತಿ ಬಂದು 30 ವರ್ಷದ ನಂತರವೂ, ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳು, ನಗರ ಮತ್ತು ಗ್ರಾಮಾಂತರ ಪ್ರದೇಶ ಇವುಗಳ ಅಂಕಿ ಅಂಶವು ಸುಮಾರು ಶೇ 25ರಷ್ಟು ದೊಡ್ಡ ಕಂದರವನ್ನು ತೋರುತ್ತದೆ.

ಒಂದಕ್ಕೊಂದು ಹೊಸೆಯಲಾಗದ ಬಹಳಷ್ಟು ಸಮಸ್ಯೆಗಳಿವೆ - ಸರ್ಕಾರೀ ಶಾಲೆಗಳಲ್ಲಿ ಆರ್.ಟಿ.ಇ ಪಾಲನೆ ತಳ ಹಿಡಿದಿದೆ, ಪ್ರತೀ ಶಾಲೆ ಮಟ್ಟದಲ್ಲಿ ಶಿಕ್ಷಕ-ವಿದ್ಯಾರ್ಥಿಯ ಅನುಪಾತ ಸ್ಪಷ್ಟವಾಗಿ ಕಡಿಮೆ ಇದೆ, ಶಾಲೆಗಳಿಗೆ ಶೈಕ್ಷಣಿಕ ಬೆಂಬಲ ನೀಡಲು ಸ್ಥಾಪಿಸಿದ ಸಂಸ್ಥೆಗಳು - ಗುಣಮಟ್ಟ ಮತ್ತು ಸಂಖ್ಯಾಮಟ್ಟಗಳೆರೆಡರಲ್ಲೂ - ಸಂಪನ್ಮೂಲಗಳಿಲ್ಲದೆ ಸೊರಗಿವೆ, ಶಾಲೆಗಳಿಗೆ ನೀಡುವ ಸಂಪನ್ಮೂಲಗಳು ಸಾಲದು ಇತ್ಯಾದಿ.

ವ್ಯವಸ್ಥೆಯ ನೆಲೆಗಟ್ಟಿನಲ್ಲಿ ಬಹು ಗಂಭೀರ ಸಮಸ್ಯೆಗಳಲ್ಲಿ ಕೆಲವೆಂದರೆ ಅ) ದೇಶದಲ್ಲಿ ಶಿಕ್ಷಕ ತರಬೇತಿಯ ಪಠ್ಯಕ್ರಮ, ವಿನ್ಯಾಸ, ಅವಧಿ ಮತ್ತು ಗುಣಮಟ್ಟ ಆ) ಉರುಹೊಡೆಯುವುದರ ಆಧಾರಿತ ಪರೀಕ್ಷಾ ಪದ್ಧತಿ ಇ) ಅಗತ್ಯವಾದ ಶಿಕ್ಷಣದ ದೃಷ್ಟಿಕೋನ, ವಿಷಯಗಳ, ಬೋಧನ ಶಾಸ್ತ್ರದ, ಶಿಕ್ಷಣ ನಿರ್ವಹಣೆಯ, ಮೌಲ್ಯಮಾಪನದ, ಶಿಕ್ಷಣದಲ್ಲಿ ತಂತ್ರಜ್ಞಾನದ, ಬಾಲ್ಯದಲ್ಲಿನ ಶಿಕ್ಷಣ, ವಿಶಿಷ್ಟ ಚೇತನರ ಶಿಕ್ಷಣ ಇತ್ಯಾದಿಗಳೆಲ್ಲದರ ಆಳವಾದ ಅರಿವುಳ್ಳ ಶೈಕ್ಷಣಿಕ ವೃತ್ತಿಪರರನ್ನು ಬೆಳೆಸುವ ಯಾವುದೇ ಶಾಲೆಗಳು ನಿಜದಲ್ಲಿ ಇಲ್ಲದಿರುವುದು; ಅದರಿಂದಾಗಿ ಶಿಕ್ಷಣ ಕ್ಷೇತ್ರದಲ್ಲಿ ಗುಣಮಟ್ಟವುಳ್ಳವರ ಕೊರತೆ ಉಂಟಾಗಿದೆ. ಇದೇ ಇಂದು ಸಮೂಹ, ಕ್ಷೇತ್ರ, ಜಿಲ್ಲೆ ಮತ್ತು ರಾಜ್ಯ ಮಟ್ಟಗಳ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಕರ ಕೊರತೆಗೆ ಅತೀ ಮುಖ್ಯ ಕಾರಣ. ಇಷ್ಟಾದರೂ ಕೂಡ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಪ್ರತಿಪಾದಿಸಿದ ಭಾರತೀಯ ಶಿಕ್ಷಣ ಸೇವೆಗಳನ್ನು ಆರಂಭಿಸಲು ಇನ್ನೂ ಸರ್ಕಾರವು ಸಂಕಲ್ಪಿಸಿಲ್ಲ.

ಇವೆಲ್ಲವುಗಳೂ ಮತ್ತು ಅದರೊಂದಿಗೆ, ಸರ್ಕಾರೀ ಧನಸಹಾಯದ ಭಾರೀ ಕಡಿತ ಸರ್ಕಾರೀ ಶಾಲೆಗಳ ಹೆಸರಿಗೆ ಮತ್ತು ಕಲ್ಪನೆಗೆ ಬಹಳಷ್ಟು ಕಳಂಕ ತಂದಿದೆ.

ಸರ್ಕಾರೀ ಶಾಲಾ ವ್ಯವಸ್ಥೆಯಲ್ಲಿ ಏನನ್ನಾದರೂ ಮಾಡುವಲ್ಲಿನ ಸಮಸ್ಯೆಗಳು ಬಹಳಷ್ಟು ದೊಡ್ಡ ಸಂಸ್ಥೆಗಳು ಎದುರಿಸುವ ಸಮಸ್ಯೆಗಳೇ. ಹಾಗಾಗಿ ಈ ಸಮಸ್ಯೆಗಳಲ್ಲಿ ಕೇವಲ ಸರ್ಕಾರೀ ವ್ಯವಸ್ಥೆಯ ಬಗ್ಗೆ ಮಾತ್ರ ಚರ್ಚಿಸುವುದು ನ್ಯಾಯವಲ್ಲ. ವೈಯಕ್ತಿಕವಾಗಿ ನನಗೆ ಸರ್ಕಾರೀ ವ್ಯವಸ್ಥೆ ಮತ್ತು ಖಾಸಗೀ ಭಾರೀ ಗಾತ್ರದ ಸಂಸ್ಥೆಗಳಲ್ಲಿನ ಚರ್ಯೆಯಲ್ಲಿ ಯಾವುದೇ ವ್ಯತ್ಯಾಸ ಕಾಣುವುದಿಲ್ಲ. ನಿರ್ಧಾರಗಳನ್ನು ಕಾರ್ಯಗತಮಾಡುವಲ್ಲಿ, ಪ್ರತಿಭಾನ್ವಿತರನ್ನು ಸೇರಿಸಿಕೊಳ್ಳುವಲ್ಲಿ ಮತ್ತು ಉಳಿಸಿಕೊಳ್ಳುವಲ್ಲಿ, ಸಾಧನೆ ಮತ್ತು ಗುಣಮಟ್ಟವನ್ನು ಉಳಿಸಿಕೊಳ್ಳುವಲ್ಲಿನ ಸಂದರ್ಭಗಳೆಲ್ಲ ಸಮಸ್ಯಾತ್ಮಕವೇ ಆಗಿರುತ್ತವೆ. ಖಾಸಗೀ ಸಂಸ್ಥೆಗಳಲ್ಲಾದರೋ ಎಲ್ಲರಿಗೂ ಲಾಭ ಅಥವಾ ಹಣ ಎಂಬ ಒಂದು ಜಮಾವಣೆಯ ಗಮ್ಯವಿದೆ, ಶಿಕ್ಷಣದಲ್ಲಾದರೋ ಎಲ್ಲ ಭಾಗೀದಾರರಿಗೂ ತಮ್ಮದೇ ಆದ ಚಿಂತನೆಗಳಿವೆ.

ಸರ್ಕಾರೀ ವ್ಯವಸ್ಥೆಯಲ್ಲಿನ ಮತ್ತೊಂದು ಕಷ್ಟವೆಂದರೆ - ರಾಜಕೀಯ ಹಸ್ತಕ್ಷೇಪ, ಒಂದು ಸ್ಥಾನದಲ್ಲಿರುವವರು ಎಷ್ಟು ದಿನ ಮುಂದುವರೆಯುತ್ತಾರೆಂಬುದು ತಿಳಿಯದಿರುವುದು ಮತ್ತು 'ಸಾಧನೆ ನಿರ್ವಹಣೆ'ಯ ಸಂಸ್ಕೃತಿಯಿಲ್ಲದಿರುವುದು ಹಾಗೂ ಹೆಚ್ಚಿನ ಪರಿಶ್ರಮಕ್ಕೆ ಯಾವುದೇ ರೀತಿಯ ಹೆಚ್ಚಿನ ಪ್ರತಿಫಲಗಳಿಲ್ಲದಿರುವುದು, ಇವೆಲ್ಲವುಗಳಿಂದ ಉಂಟಾದ ಜವಾಬ್ದಾರಿಯ ಕೊರತೆ. ಇಷ್ಟೆಲ್ಲ ಆದರೂ ಕೂಡ, ಈ ಕ್ಷೇತ್ರದಲ್ಲಿ ಬಹಳ ಸಮಯದಿಂದಿರುವ, ನಾನು ಮತ್ತು ನನ್ನ ಸಹವರ್ತಿಗಳು ಸರ್ಕಾರೀ ಶಾಲೆ ಮತ್ತು ಕಚೇರಿಗಳಿಗೆ ಭೇಟಿ ನೀಡಿದಾಗ, ಆ ಶಾಲೆ, ಕಚೇರಿಗಳಲ್ಲಿ ಕಂಡವುಗಳಿಂದ ಬಹಳಷ್ಟು ಉತ್ತೇಜಿತರಾಗುತ್ತೇವೆ.

ಸಾಮಾನ್ಯವಾಗಿ ಅಡೆ ತಡೆಗಳು ಸಮಾನವೇ ಆದರೂ ಎಲ್ಲ ಸ್ಥಾನಗಳಲ್ಲೂ ಸಾಕಷ್ಟು ಜನರಿದ್ದಾರೆ - ಶಿಕ್ಷಕರು, ಶಾಲಾ ಮುಖ್ಯಸ್ಥರು, ಸಮೂಹ-ಕ್ಷೇತ್ರ-ಜಿಲ್ಲಾ ಅಧಿಕಾರಿ ವರ್ಗ ಮತ್ತು ಪೋಷಕರ ಸಮುದಾಯಗಳು - ಇವರೆಲ್ಲ ತಮ್ಮ ತಮ್ಮ ಹೊಣೆಗಾರಿಕೆಯ ಬಗ್ಗೆ ಇಟ್ಟಿರುವ ನೆಟ್ಟ ದೃಷ್ಟಿಗಳಿಂದಾಗಿ ನಮ್ಮಲ್ಲಿ ಗೌರವ ಭಾವನೆಯನ್ನುಂಟು ಮಾಡುತ್ತಾರೆ.

ವ್ಯವಸ್ಥೆಯು ಕಡೆಗೊಂದುದಿನ ನಮ್ಮ ಸಂವಿಧಾನ, ನಮ್ಮ ಶಿಕ್ಷಣ ನೀತಿ ಮತ್ತು ನಮ್ಮ ಪಠ್ಯಕ್ರಮದ ಚೌಕಟ್ಟಿನಲ್ಲಿನ ಆಶಯದಂತೆ, ತರಗತಿಗಳಲ್ಲಿ ಬದಲಾವಣೆ ತರಲು ಅಗತ್ಯ ಜನಬಲವನ್ನು ಗಳಿಸಲಿದೆ ಎಂಬ ನಮ್ಮ ನಿರೀಕ್ಷೆಗಳನ್ನು ಅವರ ದೃಢಸಂಕಲ್ಪವು ಜೀವಂತವಾಗಿಟ್ಟಿದೆ. ಡಯಟ್ (DIET[1])ಗಳ ಪ್ರಾಂಶುಪಾಲರುಗಳು, ಒಪ್ಪಿತವಾದ ಮಟ್ಟದಲ್ಲಿ ಮೂಲಭೂತ ವ್ಯವಸ್ಥೆಗಳು, ಗುಣಮಟ್ಟದ ಮತ್ತು ಅಗತ್ಯಸಂಖ್ಯೆಯ ಮಾನವ ಸಂಪನ್ಮೂಲ ಇತ್ಯಾದಿಗಳ ಕೊರತೆಯಿದ್ದರೂ ಕೂಡ ಶಾಲೆಗಳಿಗೆ ಅರ್ಥಪೂರ್ಣವಾದ ಶೈಕ್ಷಣಿಕ ಅಗತ್ಯಗಳನ್ನು ನೀಡುವಲ್ಲಿ ನಿರತರಾಗಿದ್ದಾರೆ. ದೇಶದಲ್ಲಿನೆಲ್ಲಾ ಡಯಟ್ (DIET)ಗಳಲ್ಲಿನ ಬೋಧನಾ ಸಿಬ್ಬಂದಿಗಳ ಸಂಖ್ಯೆ ಕೇವಲ ಹತ್ತು ಮಾತ್ರ (20+ ಸಂಖ್ಯೆಯನ್ನು ಅನುಮೋದಿಸಿದ್ದರೂ ) ಅದೂ ವಿಷಯಗಳ ಮಟ್ಟದಲ್ಲಿ ಅಸಮಂಜಸ ಹಂಚಿಕೆಯಿದ್ದೂ. ಕೇವಲ ಇಬ್ಬರೇ ಬೋಧನಾ ಸಿಬ್ಬಂದಿ ಇರುವ ಡಯಟ್ (DIET)ಗಳಿವೆ. ಹಾಗಿದ್ದೂ ಪ್ರಾಂಶುಪಾಲರುಗಳು, ತಮ್ಮ ಸ್ಥೈರ್ಯವನ್ನು ಕುಸಿಯಗೊಡದೇ ಕರ್ತವ್ಯನಿರತರಾಗಿದ್ದಾರೆ.

ಒಬ್ಬ ಕ್ಷೇತ್ರಶಿಕ್ಷಣಾಧಿಕಾರಿಯೊಡನೆಯ ನನ್ನ ಸಂವಾದದಲ್ಲಿ ಕೆಲದಿನಗಳ ಹಿಂದೆ 'ನಿಮ್ಮ ಕ್ಷೇತ್ರಗಳಲ್ಲಿ ಶೇ 45ಕ್ಕೂ ಹೆಚ್ಚು ಒಂಟಿ ಶಿಕ್ಷಕರಿರುವ ಶಾಲೆಗಳಿವೆಯಲ್ಲ, ಹೇಗೆ ನಿಭಾಯಿಸುತ್ತೀರಿ?' ಎಂದು ನಾನು ಕೇಳಿದೆ . ಆತ ನಗುತ್ತಾ "ಒಂಟಿ ಶಿಕ್ಷಕರಿರುವ ಶಾಲೆಯನ್ನು ಬಿಡಿ, ನನ್ನ ಕ್ಷೇತ್ರದಲ್ಲಿ ಶಿಕ್ಷಕರೇ ಇಲ್ಲದ 127 ಶಾಲೆಗಳಿವೆ' ಎಂದು ಹೇಳಿದರು. ಶಿಕ್ಷಕರನ್ನು ಒಂದು ಶಾಲೆಯಿಂದ ಮತ್ತೊಂದು ಶಾಲೆಗೆ ತತ್ಕಾಲಿಕವಾಗಿ ಬದಲಾಯಿಸುತ್ತಾ, ವರ್ಗಾವಣೆಯನ್ನು ಮಾಡದೇ, ನಿರ್ವಹಿಸುತ್ತಿದ್ದಾರೆ. ಆತ ಗೆಲುವಾಗಿದ್ದು, ತಮ್ಮ ಹೊಣೆಯ ಸಂಪೂರ್ಣ ಅರಿವಿದ್ದು, ಉತ್ತಮ ಅಂತಃಶಕ್ತಿಯಿಂದ ಕೆಲಸಮಾಡುತ್ತಿದ್ದಾರೆ.

ದೂರದೂರುಗಳ ಬಹಳಷ್ಟು ಶಾಲಾ ಮುಖ್ಯಸ್ಥರು ಒಂಟಿ ಶಿಕ್ಷಕ ಶಾಲೆಗಳಾಗಿದ್ದರೂ (ಕೆಲವೆಡೆ ಶಿಕ್ಷಕರಿಲ್ಲದ ಶಾಲೆ) ಕೂಡ ತಮ್ಮ ಶಕ್ತಿ ಮೀರಿ ಮಕ್ಕಳು ಕಲಿಯಲು ಅನುವಾಗುತ್ತಿದ್ದಾರೆ. ಸಂಪನ್ಮೂಲಗಳ ಕೊರತೆಯಿದ್ದೂ ಮತ್ತು ವ್ಯವಸ್ಥೆಯ ಅಸಡ್ಡೆಯನ್ನೂ ಮೀರಿ ತಮ್ಮ ಶಾಲೆಗಳು ಓರಣವಾಗಿದ್ದು, ಬೆಳಗಿನ ಸಭೆಗಳು ಸರಿಯಾಗಿ ನಡೆದು, ಶಿಕ್ಷಕರು ಶ್ರದ್ಧೆಯಿಂದ ಕಲಿಸುವಂತೆ, ವಿಶಿಷ್ಟ ಮಕ್ಕಳನ್ನು ಸರಿಯಾಗಿ ಗಮನಿಸುತ್ತಾ, ಶಾಲಾ ನಿರ್ವಹಣಾ ಮಂಡಳಿಯ ಸಭೆಗಳು ನಿಯಮಿತವಾಗಿ ಮತ್ತು ಉಪಯುಕ್ತವಾಗಿ ನಡೆಯುವಂತೆ ಗಮನಿಸುತ್ತಾ ಮತ್ತು ಮಧ್ಯಾಹ್ನದ ಊಟ ಎಲ್ಲ ಮಕ್ಕಳಿಗೂ ದೊರಕುವಂತೆ ಮಾಡುತ್ತಾ - ತಮ್ಮೆಲ್ಲ ಶಕ್ತಿಯನ್ನು ಧಾರೆಯುತ್ತಾರೆ, ಸರ್ಕಾರೀ ಯೋಜನೆಗಳ ಮೂಲಕ ದೊರೆತ ವಿಜ್ಞಾನದ ಉಪಕರಣಗಳನ್ನು ತೆಗೆದು, ಉಪಯೋಗಿಸುವಂತೆ ಮಾಡುತ್ತಾರೆ ಇಂತಹವರು. ಅಂತಹ ಒಬ್ಬ ಪ್ರಾಂಶುಪಾಲರನ್ನು ಕಳೆದವಾರವಷ್ಟೇ ಭೇಟಿಯಾಗಿದ್ದೆ, ಎಂತಹ ಮನದುಂಬುವ ಅನುಭವ! ಪ್ರಾಂಶುಪಾಲರು ಈಚೆಗೆ ತಮ್ಮ ಸಾಧನೆಗಾಗಿ ರಾಜ್ಯಪಾಲರ ಪುರಸ್ಕಾರವನ್ನು ಪಡೆದರು ಎಂದು ಗೊತ್ತಾಯಿತು.

ಮತ್ತೂ ಇನ್ನೊಂದು ರೀತಿಯ ಶಿಕ್ಷಕರೂ ಕಾಣಸಿಗುತ್ತಾರೆ. ಅವರಾದರೋ ಕೆಟ್ಟ ಹವೆಯನ್ನೂ ಮೀರಿ, ದೂರದೂರಗಳನ್ನು ದಾಟಿ ಶಾಲೆಗೆ ಬರುತ್ತಾರೆ, ಬಂದು ತರಗತಿಯ ಮಕ್ಕಳ ಬಗ್ಗೆ ಕಾಳಜಿ ವಹಿಸುತ್ತಾರೆ, ತಮ್ಮ ಸುತ್ತಲಿನ ಹೊಸ ವಿಷಯಗಳನ್ನು ಅರಿಯಲು ಪ್ರಯತ್ನ ಪಡುತ್ತಾರೆ ಅಲ್ಲದೇ ಮಕ್ಕಳೂ ಕೂಡ ತಮ್ಮ ಸುತ್ತಲಿನವುಗಳ ಅನುಭವ ಪಡೆಯುವಂತೆ ಅನುವು

[1] District Institutes of Education Training – ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಗಳು

ಮಾಡಿಕೊಡುತ್ತಾರೆ. ಇಂತಹ ಶಿಕ್ಷಕರು ಕಲಿಯಲು ಬಹಳ ಉತ್ಸುಕರಾಗಿರುತ್ತಾರೆ. ಈ ಶಿಕ್ಷಕರು ಅಜೀಮ್ ಪ್ರೇಮ್‌ಜೀ ಪ್ರತಿಷ್ಠಾನದ ಸ್ವಂತ ಇಚ್ಛೆಯ ಶಿಕ್ಷಕಗೋಷ್ಠಿಗಳಲ್ಲಿ ಉತ್ಸುಕತೆಯಿಂದ ಪಾಲ್ಗೊಳ್ಳುತ್ತಾರೆ; ಅದೂ ಭಾನುವಾರ ಹಾಗೂ ರಜಾ ದಿನಗಳೂ ಸೇರಿದಂತೆ, ಶಾಲೆಯ ಆಚೆಗಿನ ಸಮಯದಲ್ಲಿ. ತಮ್ಮ ವೃತ್ತಿಗೆ ಅವರು ಹೊಸ ಭಾಷ್ಯಗಳನ್ನು ಬರೆಯಲು ಇಚ್ಛಿಸುತ್ತಾರೆ. ಈ ಪಂಗಡದ ಶಿಕ್ಷಕರನ್ನು ಏಕೆ ಸಾರ್ವಜನಿಕರು ಹೀಗಳೆಯುತ್ತಾರೆ, ಅದೂ ಸರ್ಕಾರೀ ಶಾಲೆಗಳನ್ನು ನೋಡದೆಯೇ - ಎಂದು ಅಜೀಮ್ ಪ್ರೇಮ್‌ಜೀ ಪ್ರತಿಷ್ಠಾನದ ನಾವು ತಿಳಿಯಲು ವಿಫಲರಾಗಿದ್ದೇವೆ.

ಸರ್ಕಾರೀ ಶಿಕ್ಷಣ ಸಿಬ್ಬಂದಿಗಳ ದೊಡ್ಡ ಸಭೆಗಳಲ್ಲಿ ಹಲವಾರು ಬಾರಿ ಈ ಗುಂಪಿನವರು ಸರ್ಕಾರೀ ಶಾಲೆಗಳಿಂದ ಖಾಸಗೀ ಶಾಲೆಗೆ ಗುಳೆ ಹೋಗುತ್ತಿರುವುದರ ಬಗ್ಗೆ ಆತಂಕ ವ್ಯಕ್ತಪಡಿಸುತ್ತಾರೆ. ಸರ್ಕಾರೀ ಶಾಲೆಗಳಲ್ಲಿ ಹೆಚ್ಚಿನಂಶ ಉತ್ತಮ ಮೂಲಭೂತ ವ್ಯವಸ್ಥೆ, ಉತ್ತಮ ಓದಿನ ಮತ್ತು ಹೆಚ್ಚು ವೇತನ ಪಡೆವ ಶಿಕ್ಷಕರು, ಉತ್ತಮ ಶೈಕ್ಷಣಿಕ ಬೆಂಬಲ, ಹೆಚ್ಚಿನ ಸೇವಾವಧಿಯ ತರಬೇತಿ ಮತ್ತು ಸರಾಸರಿ ಪ್ರತೀ ಮಗುವಿಗೆ ಹೆಚ್ಚಿನ ವೆಚ್ಚ, ಇವೆಲ್ಲ ಇವೆ ಎಂದು ಇವರೆಲ್ಲ ಒಪ್ಪುತ್ತಾರೆ. ಹಾಗಿದ್ದೂ, ಅವರಲ್ಲಿ ಬಹಳ ಮಂದಿ ತಮ್ಮ ಮಕ್ಕಳನ್ನು ಖಾಸಗೀ ಶಾಲೆಗೇ ಸೇರಿಸುತ್ತಾರೆ. ಏಕೆ ಎಂದು ಕೇಳಿದರೆ ನಿರುತ್ತರರಾಗುತ್ತಾರೆ ಮತ್ತು ವಿವರಿಸಲು ಹೆಣಗುತ್ತಾರೆ. ಹೆಚ್ಚು ಆಳವಾಗಿ ಚರ್ಚಿಸಿದಾಗ, ಕಂಡು ಬಂದ ಸತ್ಯವೆಂದರೆ ಸರ್ಕಾರೀ ಶಾಲೆಗಳ ಕುಖ್ಯಾತಿ ಮತ್ತು ಹಲವು ಕಾಲದಿಂದ ಅವನತಿಗಿಳಿಯುತ್ತಿರುವ ಅದರ ಹೆಸರು. ಅದು ಹೇಗೋ ಖಾಸಗೀ ಶಾಲೆಗಳು, ತಮ್ಮ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ ಹೆಚ್ಚಿನದಿದೆ ಎಂದು ಬಿಂಬಿಸುವಲ್ಲಿ ಯಶಸ್ವಿಯಾಗಿವೆ. ಯಾವುದೇ ಸಂಶೋಧನೆ ಮತ್ತು ಅಂಕಿ-ಅಂಶಗಳ ಆಧಾರ ಅದಕ್ಕಿಲ್ಲ. ನಿಜವಾಗಿ, ಕಳೆದ 12 ವರ್ಷಗಳಲ್ಲಿನ ಬಹಳಷ್ಟು ಸಂಶೋಧನೆಗಳು, ಸರ್ಕಾರೀ ಅಥವಾ ಖಾಸಗೀ ಶಾಲೆಗಳ ಗುಣ ಮಟ್ಟದಲ್ಲಿ ಯಾವುದೇ ವ್ಯತ್ಯಾಸವಿಲ್ಲ, ಇರುವಲ್ಲಿ ಸರ್ಕಾರೀ ಶಾಲೆಗಳಲ್ಲೇ ಸ್ವಲ್ಪ ಉತ್ತಮವಿದೆ ಎಂದು ತೋರಿಸಿವೆ.

ಮತ್ತಷ್ಟು ಗಮನಿಸಬೇಕಾದ ವಿಷಯಗಳು:

ದಾಖಲಾಗಲು ಬಂದ ಎಲ್ಲ ಮಕ್ಕಳನ್ನೂ ಸೇರಿಸಿಕೊಳ್ಳುವ ಸರ್ಕಾರೀ ಶಾಲೆಗಳಿಗೆ ಸಾಮಾಜಿಕ ಮತ್ತು ಕಾನೂನಾತ್ಮಕ ಹೊಣೆಯಾದರೂ ಇದೆ. ಅವು ಸಾಮಾಜಿಕ-ಆರ್ಥಿಕ ಮಟ್ಟ, ಜಾತಿ, ಧರ್ಮ ಅಥವಾ ಮಗುವಿನ ಶೈಕ್ಷಣಿಕ ಸಾಧನೆಯ ಮಾಪನ ಇಂತಹಾ ಯಾವುದೇ ಕಾರಣಗಳಿಂದ ಭೇದ ತೋರುವ ಹಾಗಿಲ್ಲ. ಅಂದರೆ, ಖಾಸಗೀ ಶಾಲೆಗಳು ಮಾಡುವ ಹಾಗೆ ಮಕ್ಕಳನ್ನು ಆಯ್ದು ಸೇರಿಸಿಕೊಳ್ಳುವಂತಿಲ್ಲ.

ಸಾಧಾರಣವಾಗಿ ಸರ್ಕಾರೀ ಶಾಲೆಗಳಿಗೆ ಸಾಮಾಜಿಕ-ಆರ್ಥಿಕವಾಗಿ ಹಿಂದುಳಿದವರು ಬರುವುದರಿಂದ, ಅವರಿಗೆ ಬಾಲ್ಯದ ಆರಂಭದ ಶಿಕ್ಷಣ ಇರುವುದಿಲ್ಲ ಅಥವಾ ಇದ್ದರೂ ಅದು ಬಹಳ ಕಡಿಮೆ. ಅವರ ಪೋಷಕರು ಅನಕ್ಷರಸ್ಥರು ಇಲ್ಲವೇ ಶಿಕ್ಷಣದ ಮೊದಲ ತಲೆಮಾರಿನವರು, ಕೇವಲ ಕುಟುಂಬದ ಹೊಟ್ಟೆ ಹೊರೆಯುವಿಕೆಗೇ ತಮ್ಮೆಲ್ಲ ಸಮಯ ವಿನಿಯೋಗಿಸಬೇಕಾದ ಪರಿಸ್ಥಿತಿಯಲ್ಲಿರುವುದರಿಂದ ತಮ್ಮ ಮಕ್ಕಳ ಕಲಿಕೆಗೆ ಯಾವುದೇ ಬೇಂಬಲ ಕೊಡಲು ಆಗದವರು. ಹಾಗಾಗಿ ಮಕ್ಕಳು ಮೊದಲ ಇಯತ್ತೆಗೆ ಸೇರಲೂ ತಕ್ಕ ತಯಾರಿ ಇರದವರು. ಆದರೆ, ಖಾಸಗೀ ಶಾಲೆಯ ಬಹುಪಾಲು ಸಮವಯಸ್ಕರು, ಶಾಲಾ-ಪೂರ್ವ ಶಿಕ್ಷಣಕ್ಕೆ ಪಕ್ಕಾದವರು, ತಂದೆ-ತಾಯಿಯರು ಮಕ್ಕಳ ಬೆಳವಣಿಗೆಯಲ್ಲಿ ತೊಡಗಿಸಿಕೊಳ್ಳಲು ಶಕ್ಯರಾದಷ್ಟು ಸಧೃಡ ಸಾಮಾಜಿಕ-ಆರ್ಥಿಕ ಹಿನ್ನೆಲೆಯವರು

ಸರ್ಕಾರೀ ಶಾಲೆಗಳಾದರೋ ಸಾಮಾನ್ಯ ಜನ ಗಣನೆಗೇ ತೆಗೆದುಕೊಳ್ಳದ ಭಾರೀ ಅನನುಕೂಲಗಳೊಡನೆ ಹೋರಾಡಬೇಕಾಗುತ್ತದೆ. ಬಹಳಷ್ಟು ಖಾಸಗೀ ಶಾಲೆಗಳಲ್ಲಿರುವಂತೆ, 10ನೇ ತರಗತಿಯ ಪರೀಕ್ಷೆಗಳಲ್ಲಿ ಚೆನ್ನಾಗಿ ಮಾಡುವಂತೆ ತಯಾರು ಮಾಡುವುದಷ್ಟೇ ಸರ್ಕಾರೀ ಶಾಲೆಗಳ ಗಮನವಾಗಿರುವುದಿಲ್ಲ.

ಭಾರತದಲ್ಲಿನ ಸರ್ಕಾರೀ ಶಾಲಾ ವ್ಯವಸ್ಥೆ ಪ್ರಪಂಚದಲ್ಲೇ ಅತೀ ದೊಡ್ಡದು ಮತ್ತು ಅದರ ವಿಶೇಷವೆಂದರೆ ಯಾವುದೇ ಹಳ್ಳಿಯ ಒಂದು ಕಿಲೋಮೀಟರ್ ಒಳಗೇ ಪ್ರಾಥಮಿಕ ಶಾಲೆ ಇರುವುದು. ಯಾವ ದೇಶದಲ್ಲಿ ಮೂಲಭೂತ ಸೌಲಭ್ಯಗಳ (ರಸ್ತೆ, ವಿದ್ಯುತ್ ಮತ್ತು ನೀರು ಸರಬರಾಜು) ಪೂರೈಕೆ ಬಹಳ ಹಿಂದುಳಿದಿದೆಯೋ ಅಲ್ಲಿ, ಶಿಕ್ಷಣ ಸಮಾಜದ ಎಲ್ಲ ಭಾಗಗಳಿಗೂ ತಲುಪಿರುವುದು, ನಿಜಕ್ಕೂ ದೊಡ್ಡ ಸಾಧನೆಯೇ.

ಈ ಸಾಧನೆಯನ್ನು ನಾವು ಬಳಸಿಕೊಳ್ಳಬೇಕಾದರೆ, 'ಸರ್ಕಾರೀ ಶಾಲೆಯ, ಹೆಸರನ್ನು' ಪಸರಿಸಬೇಕು. ಖಾಲೀ ಹೇಳಿಕೆಗಳಿಂದಲ್ಲ, ತುರ್ತಾಗಿ ಮತ್ತು ಕ್ರಿಯಾಶೀಲತೆಯಿಂದ ವ್ಯವಸ್ಥೆಯಲ್ಲಿರುವ ಕೊರತೆಗಳನ್ನು ತುಂಬಿ, ಖ್ಯಾತಿ ಹರಡುವುದರಲ್ಲಿನ ತೊಡರಿಕೆಗಳನ್ನು ನಿವಾರಿಸಬೇಕು. ಇದು ಸಾಧ್ಯ ಎಂದು ನಮಗಂತೂ ನಂಬಿಕೆ ಇದೆ, ಅಷ್ಟೇ ಅಲ್ಲ, ಭಾರತದಂತಹ ದೇಶಕ್ಕೆ, ಸರ್ಕಾರೀ ಶಿಕ್ಷಣ ವ್ಯವಸ್ಥೆಯನ್ನು ಉತ್ತಮ ಪಡಿಸದೇ ಮತ್ತು ಗುಣಮಟ್ಟದ ಶಿಕ್ಷಣವನ್ನು ಎಲ್ಲ ಮಕ್ಕಳಿಗೂ ಸಿಗುವಂತೆ ಮಾಡಿ ಅದರ ಖ್ಯಾತಿಯನ್ನು ಹಬ್ಬಸಿದಲ್ಲದೇ ಮತ್ತಾವುದೇ ದಾರಿಗಳಿಲ್ಲ.

/////////////////////////////////////////////////////////////////////////////////////////

ಈ ಕೆಳಗಿನ ಭಾಗದ ಅನುವಾದಕ: ಬಾಲಕೃಷ್ಣ ಬಿ.ಎಂ. ಹೊಸಂಗಡಿ

ದಿಲೀಪ್ ರಂಜೇಕರ್ ಅವರು ಅಜೀಮ್ ಪ್ರೇಮ್‌ಜೀ ಪ್ರತಿಷ್ಠಾನದ ಸ್ಥಾಪಕ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯಾಗಿದ್ದವರು. ಅವರು ವಿಜ್ಞಾನ ಪದವೀಧರರು. ಬಿಸಿನೆಸ್ ಮ್ಯಾನೇಜ್‌ಮೆಂಟ್‌ನಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಮತ್ತು ಪರ್ಸನಲ್ ಮ್ಯಾನೇಜ್‌ಮೆಂಟ್ ಮತ್ತು ಇಂಡಸ್ಟ್ರಿಯಲ್ ರಿಲೇಷನ್ಸ್‌ನಲ್ಲಿ ಮುಂಬಯಿಯ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸಯನ್ಸ್‌ನಿಂದ ಸ್ನಾತಕೋತ್ತರ ಪದವಿ ಗಳಿಸಿದ್ದಾರೆ. 1976ರಲ್ಲಿ ಅವರು ನೇರ ಕ್ಯಾಂಪಸ್‌ನಿಂದ ವಿಪ್ರೋ ಸೇರಿಕೊಂಡರು. ಅವರು ದನಿ, ಸಂಸ್ಕೃತಿ, ನಿರ್ವಹಣಾ ಪ್ರಕ್ರಿಯೆ ಮತ್ತು ಸಂಸ್ಥೆಯ ಜನ ಅಭಿವೃದ್ಧಿ ಪ್ರಕ್ರಿಯೆ ಇತ್ಯಾದಿಗಳನ್ನು ರೂಪಿಸಿದ ವಿಪ್ರೋದ ಮುಖ್ಯ ತಂಡದಲ್ಲಿ ಇದ್ದವರು ದಿಲೀಪ್. ಪ್ರತಿಷ್ಠಾನದ ಆರಂಭದಿಂದಲೇ ಜತೆಗೆ ಇರುವವರು. ಅವರನ್ನು dkr@azimpremjifoundation.org ಮೂಲಕ ಸಂಪರ್ಕಿಸಬಹುದು.